**ದಿನಾಂಕ:11-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ವಿ.ಬಿ.ಎಂ. ರವರಿಂದ:-**

ನಾನು ಎಸ್.ಎಸ್.ಎಲ್.ಸಿ ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ್ದೇನೆ. ನಾನು ಖಾಸಗಿ ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ. ಈ ದಾವೆಯಲ್ಲಿ 2 ಮತ್ತು 3 ನೇ ಪ್ರತಿವಾದಿಯರು ನನ್ನ ಸ್ವಂತ ತಮ್ಮಂದಿರು. ನನಗೆ ಗಂಗವ್ವ ಎಂಬ ಅಕ್ಕ ಇದ್ದಾಳೆ ಎಂದರೆ ಸರಿ. ಗಂಗವ್ವ ರವರ ಪೂರ್ಣ ಹೆಸರು ಗಂಗವ್ವ ದಶರಥ ಕಾಂಬ್ಳೆ ಎಂದು . ಅವರನ್ನು ಕಾಕತಿಗೆ ಮದುವೆ ಮಾಡಿಕೊಡಲಾಗಿದೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನಾವು ಇದುವರೆಗೂ ಅರ್ಜಿ ಹಾಕಿಲ್ಲ ಎಂದರೆ ಸರಿ. ನನ್ನ ತಾಯಿ ಹೆಸರು ಸೀತವ್ವ, ತಂದೆ ಹೆಸರು ಬರ್ಮ ಎಂದು. ನನ್ನ ತಾಯಿ ಜೀವಂತ ಇದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನಾವು ಇದುವರೆಗೂ ಅರ್ಜಿ ಹಾಕಿಲ್ಲ ಎಂದರೆ ಸರಿ. ನನ್ನ ತಂದೆಗೆ ಬಾಳಪ್ಪ ಮತ್ತು ಚಂದ್ರವ್ವ ಎಂಬ ತಮ್ಮ, ತಂಗಿ ಇದ್ದರು ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು (ಅಜ್ಜ) ಬಾಳಪ್ಪ ಎಂದು . ನನ್ನ ಚಿಕ್ಕಪ್ಪನವರದ್ದು ಮದುವೆಯಾಗಿತ್ತು ಎಂದರೆ ಸರಿ , ಅವರು ಚಿಕ್ಕನಿಂದಲೇ ನಮ್ಮ ಮನೆಗೆ ಬಂದಿಲ್ಲ ಎನ್ನುತ್ತಾರೆ. ನನ್ನ ಚಿಕ್ಕಪ್ಪನ ಹೆಂಡತಿ ಹೆಸರು ರುದ್ರವ್ವ, ಅವರು ಪಾರಿಶವಾಡದವರು ಎಂದರೆ ಸರಿ. ನನ್ನ ಅತ್ತೆ ಚಂದ್ರವ್ವಳನ್ನು ಯಾವ ಊರಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸಾಕ್ಷಿ ಅವರಿಗೆ ಮದುವೆ ಆಗಿರಲಿಲ್ಲ ಎನ್ನುತ್ತಾರೆ. ಅವರು ಕಳೆದ ಫೆಬ್ರವರಿಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ಅಜ್ಜನ ತಂದೆ ಹೆಸರು ನನಗೆ ಗೊತ್ತಿಲ್ಲ. ಅವರ ಹೆಸರು ತಿಳಿದುಕೊಳ್ಳಲು ನಾನು ಈ ದಿನದವರೆಗೂ ಪ್ರಯತ್ನ ಮಾಡಿಲ್ಲ. ನನ್ನ ಅಜ್ಜನ ತಂದೆ ಯಾವ ಊರಿನಲ್ಲಿ ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪೂರ್ವಜರ

ಖಾಯಂ ಊರು ಯಾವುದು ಎಂದರೆ ಸಾಕ್ಷಿ ನಾವು ನಮ್ಮ ಅಜ್ಜನ ಕಾಲದಿಂದಲೂ ಕಣಬರ್ಗಿಯಲ್ಲಿ ಇದ್ದೇವೆ ಎನ್ನುತ್ತಾರೆ. ನಮ್ಮ ಅಜ್ಜ ಬಾಳಪ್ಪ ರವರಿಗೆ ಯಲ್ಲಪ್ಪ ಎಂಬ ತಮ್ಮ ಇದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಅವರಿಗೆ ಬಸಪ್ಪ ಎಂಬ ಅಣ್ಣ ಇದ್ದರು ಎನ್ನುತ್ತಾರೆ. ನಮ್ಮ ಅಜ್ಜನ ಯಲ್ಲಪ್ಪ ರವರಿಗೆ ಭೀಮವ್ವ ಎಂಬ ಹೆಂಡತಿ ಇದ್ದರು ಎಂದರೆ ನನಗೆ ಗೊತ್ತಿಲ್ಲ.

**2.** ನಾನು ಮನೆ ಸಂಖ್ಯೆ 418 ರಲ್ಲಿ ವಾಸವಿದ್ದೇನೆ. ಸಾಕ್ಷಿಗೆ ನಿಪಿ-51 ನ್ನು ತೋರಿಸಿ ಇದೇ ಮನೆಯಲ್ಲಿ ನೀವು ವಾಸವಿದ್ದೀರಾ ಎಂದರೆ ಸಾಕ್ಷಿ ಅದನ್ನು ಒಪ್ಪಿಕೊಂಡಿರುತ್ತಾರೆ. ಅದರ ಸಂಖ್ಯೆ 418/ಬಿ ಎಂದು ನಮೂದಾಗಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಮೊದಲು 418 ಎಂದು ಇತ್ತು, ವಿಭಾಗವಾದ ನಂತರ 418/ಎ ಮತ್ತು 418/ಬಿ ಎಂದು ಆಗಿದೆ ಎನ್ನುತ್ತಾರೆ. ನಿಪಿ-52 ರ ಪ್ರಕಾರ 1973 ರಿಂದ 1977 ರವರೆಗೆ 418/ಎ ಎಂದು ಇತ್ತು ಎಂದರೆ ಸರಿ. 418/ಎ ಮೊದಲು ಭೀಮವ್ವ ಯಲ್ಲಪ್ಪ ಪಿರಗಿ ಮತ್ತು ಅವರ ಗಂಡ ಯಲ್ಲಪ್ಪ ಪಿರಗಿ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಅವರಿಬ್ಬರಿಗೂ ಮಕ್ಕಳು ಇರಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಯಲ್ಲಪ್ಪ ಮತ್ತು ಭೀಮವ್ವ ರವರನ್ನು ನಾನು ನೋಡಿಲ್ಲ ಎನ್ನುತ್ತಾರೆ. ಯಲ್ಲಪ್ಪ ಮತ್ತು ಭೀಮವ್ವ ರವರ ಮರಣಾನಂತರ ಸದರಿ ಸ್ವತ್ತಿಗೆ ನನ್ನ ತಂದೆ ಮತ್ತು ಚಿಕ್ಕಪ್ಪ ರವರ ಹೆಸರನ್ನು ನಮೂದಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ . 418/ಎ ಮನೆಯಲ್ಲಿ ನನ್ನ ತಮ್ಮ ಯಲ್ಲಪ್ಪ ಮತ್ತು ಅವರ ಕುಟುಂಬದವರು ವಾಸವಿದ್ದಾರೆ . ನಿಮಗೆ ವ್ಯವಹಾರ ಜ್ಞಾನ ಯಾವಾಗ ಬಂತು ಎಂದರೆ (ಈ ಪ್ರಶ್ನೆಗೆ ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದು ತಕರಾರಿಗೆ ಒಳಪಟ್ಟು ಸಾಕ್ಷಿಯ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು) ಸಾಕ್ಷಿ ನನ್ನ ಪ್ರೌಢಶಾಲಾ ಶಿಕ್ಷಣ ಮುಗಿದ ನಂತರ ಬಂದಿದೆ.

**3.** ನಮ್ಮ ಅಜ್ಜ ಬಾಳಪ್ಪ ರವರ ತಮ್ಮ ಯಲ್ಲಪ್ಪ ಆಗಿರುವುದರಿಂದ ಅವರ ಮರಣಾನಂತರ ಅವರ ವಂಶಸ್ಥರು ನಾವಾಗಿರುವುದರಿಂದ ವಾರಸನಾತೆಯಿಂದ ನಮ್ಮ ಹೆಸರನ್ನು ದಾಖಲೆಗಳಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಮ್ಮ ಅಜ್ಜ ಬಾಳಪ್ಪ ರವರಿಗೆ ಬಸಪ್ಪ ಎಂಬ ಅಣ್ಣ ಇದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ಲಿಖಿತ ಪುರಾವೆ ಇಲ್ಲ ಎಂದರೆ ಸರಿ. ನನ್ನ ಬಳಿ ನನ್ನ ಮುತ್ತಜ್ಜ ಬರ್ಮ ರವರ ಹೆಸರಿನಲ್ಲಿದ್ದ ಆಸ್ತಿಯ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಈಗ ನನ್ನ ಬಳಿ ಇಲ್ಲ , ಇದ್ದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನನ್ನ ಬಳಿ ಯಾವುದೇ ಪುರಾವೆ ಇಲ್ಲದೆ ಇರುವ ಕಾರಣ ಇಲ್ಲಿಯವರೆಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಆಗ ನಮ್ಮ ಬಳಿ ಯಾವುದೇ ಸ್ವತ್ತುಗಳು ಇರಲಿಲ್ಲ ಎನ್ನುತ್ತಾರೆ. ನನ್ನ ಮುತ್ತಜ್ಜ ಮರಣ ಪ್ರಮಾಣ ಪತ್ರ ಮತ್ತು ವಾರಸಾ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮುತ್ತಜ್ಜನಿಗೆ ಬಾಳಪ್ಪ ಮತ್ತು ಯಲ್ಲಪ್ಪ ಎಂಬ ಇಬ್ಬರೇ ಮಕ್ಕಳು ಎಂದರೆ ಸಾಕ್ಷಿ ಯಲ್ಲಪ್ಪ ಇರಲಿಲ್ಲ , ಬಸಪ್ಪ ರವರು ಇದ್ದರು ಎನ್ನುತ್ತಾರೆ. ಬಾಳಪ್ಪ ಮತ್ತು ಯಲ್ಲಪ್ಪ ರವರು ಮಾತ್ರ ನಮ್ಮ ಮುತ್ತಜ್ಜನಿಗೆ ಮಕ್ಕಳು ಎಂದು ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ನನ್ನ ತಂದೆ ಬರ್ಮ ದಿನಾಂಕ 01.06.1940 ರಂದು ಜನಿಸಿರುತ್ತಾರೆ ಎಂದರೆ ಸರಿ. ಅವರು 1 ನೇ ತರಗತಿಯನ್ನು ಕಣಬರ್ಗಿ ಶಾಲೆಯಲ್ಲಿ ಓದಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನಿಪಿ-48 ನ್ನು ತೋರಿಸಲಾಗಿ ಅದು ನನ್ನ ತಂದೆಯ ವ್ಯಾಸಾಂಗ ಪ್ರಮಾಣ ಪತ್ರ ಎಂದು ಒಪ್ಪಿ ಕೊಂಡಿರುತ್ತಾರೆ. ನನ್ನ ತಂದೆಯ ಹೆಸರನ್ನು ಆಗ ಬರ್ಮ ಬಾಳಪ್ಪ ಪಿರಗಣ್ಣವರ್ ಎಂದು ಹಚ್ಚಲಾಗಿದೆ ಎಂದರೆ ಸರಿ. ನನ ತಂದೆಯ ತಮ್ಮ ಬಾಳಪ್ಪ ರವರು ನನ್ನ ತಂದೆ ಹುಟ್ಟಿದ 10 ವರ್ಷಗಳ ನಂತರ ಹುಟ್ಟಿದ್ದಾರೆ ಎಂದರೆ ಸರಿ. ಅವರು 7 ನೇ ತರಗತಿವರೆಗೆ ಕಣಬರ್ಗಿ

ಶಾಲೆಯಲ್ಲಿ ಓದಿದ್ದಾರೆ ಎಂದರೆ ಸರಿ. ಅವರ ಹೆಸರನ್ನು ಬಾಳಪ್ಪ ಪಿರಗಣ್ಣವರ್ ಎಂದು ಬರೆದಿದ್ದಾರೆ ಎಂದರೆ ಸರಿ. ಶಾಲಾ ದಾಖಲಾತಿಗಳ ಪ್ರಕಾರ ನಮ್ಮ ತಂದೆ ಮತ್ತು ನನ್ನ ಚಿಕ್ಕಪ್ಪನ ಜಾತಿಯನ್ನು ಹಿಂದೂ ಹೊಲೆಯರ್ ಎಂದು ಬರೆದಿದ್ದಾರೆ ಎಂದರೆ ಸರಿ. ನಮ್ಮ ಪೂರ್ವಜರ ಕಾಲದಿಂದಲೂ ನಮ್ಮ ಅಡ್ಡ ಹೆಸರು ಪಿರಗಣ್ಣವರ್ ಎಂದು ಇದೆ ಎಂದರೆ ಸರಿ. ನಮ್ಮ ಪೂರ್ವಜರು ಜೀವಂತ ಇದ್ದಾಗ ಅವರ ಅಡ್ಡ ಹೆಸರು ಪಿರಗಿ ಎಂದು ಎಲ್ಲಿಯೂ ನಮೂದಾಗಿರಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಮ್ಮ ತಂದೆಯ ಅಡ್ಡ ಹೆಸರು ಪಿರಗಿ ಎಂದು ಇತ್ತು ಎನ್ನುತ್ತಾರೆ. ನಮ್ಮ ತಂದೆ ಅಡ್ಡ ಹೆಸರನ್ನು ಪಿರಗಿ ಎಂದು ಯಾವ ವರ್ಷ ಬದಲಾವಣೆ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ನಮಗೆ 2 ಎಕರೆ ಜಮೀನು ಮಂಜೂರಾದಾಗ ನನ್ನ ತಂದೆಯ ಅಡ್ಡ ಹೆಸರನ್ನು ಪಿರಗಿ ಎಂದು ಬರೆಯಲಾಯಿತು ಎನ್ನುತ್ತಾರೆ. ನಮ್ಮ ಮುತ್ತಜ್ಜನ ಕಾಲಕ್ಕೆ ನಮ್ಮ ಅಡ್ಡ ಹೆಸರನ್ನು ಹೊಲೆಯರ್ ಎಂದು ಕರೆಯುತ್ತಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**